MYSORE LEGISLATIVE ASSEMBLY

FIFTY-FIRST DAY.

Friday, 14th September 1962.

The House met in the Assembly Hall, Vidhana Soudha, Bangalore, at One of the Clock.

MR. SPEAKER (SRI B. VAIKUNTA BALIGA, B.A., B.L.) in the Chair.

STARRED QUESTIONS

(To which oral answers were given)

Prohibition cases in Mandya District.

*Q.—483. Sri G. MADE GOWDA (Malavalli).—

Will the Government be pleased to state :—

(*a*) the number of prohibition cases investigated in Mandya District, after introduction of prohibition there ;

(*b*) the number of such cases launched and ended in conviction ;

(*c*) the number of them acquitted?

A.—Sri D. DEVARAJ URS (Minister for Labour, Housing and Transport) [on behalf of Sri R. M. PATIL (Minister for Home)].—

(*a*)— 19 .

1-7-1961 to 31-12-1961 ... 203

1-1-1962 to 13-7-1962 ... 235

(*b*)	*No. of cases launched.*	*No. of cases ended in conviction.*
1961	201	175
1962	216	167

(*c*)	1961	1962
	12	4

ಶ್ರೀ ಜಿ. ಮಾದೇಗೌಡ.—ಉತ್ತರದಲ್ಲಿ 1961 ಮತ್ತು 1962ನೇ ಸಾಲಿನಲ್ಲಿ ಎಷ್ಟು ಕೇಸುಗಳಿದ್ದುವೆನ್ನುವುದಕ್ಕೆ 203 ಮತ್ತು 235 ಎಂದು ಇದೆ. ಇದರ ವಿವರಗಳನ್ನು ಸರಿಯಾಗಿ ಹೇಳುವುದಕ್ಕೆ ಆಗುವುದಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಕೇಳಿದ್ದರೆ ಅದನ್ನು ಹೇಳುತ್ತಿದ್ದೆ. ಈಗ ಹೇಳುತ್ತೇನೆ. 203 ಕೇಸುಗಳ ಪೈಕಿ 201 ಕೇಸುಗಳಲ್ಲಿ charge sheet ಹಾಕಲಾಗಿದೆ. 175 ಕೇಸುಗಳಲ್ಲಿ ಕನ್‌ವಿಕ್ಟ್ ಆಗಿದೆ. 12 ಕೇಸುಗಳು Acquitted ಆಗಿವೆ.

ಶ್ರೀ ಜಿ. ಮಾದೇಗೌಡ.—ಪಾನ ಮಾಡತಕ್ಕವರು ಎಲ್ಲಿಂದ ಬಂದಿದ್ದಾರೆನ್ನುವುದು ಸರ್ಕಾರಕ್ಕೆ ಗೊತ್ತಿದೆಯೇ ?

Sri D. DEVARAJ URS.—I have no information.

ಶ್ರೀ ಜಿ. ಮಾದೇಗೌಡ.—ಇನ್‌ವೆಸ್ಟಿಗೇಷನ್ನು ಮಾಡುವಾಗ, ಎಲ್ಲಿಂದ ಬಂದದ್ದು ಎನ್ನುವುದು ಸರಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಎಲ್ಲ ಜಿಲ್ಲೆಯಲ್ಲೂ ಕುಡಿಯುವವರಿರುತ್ತಾರೆ. ಯಾವ ಜಿಲ್ಲೆಯಿಂದ ಬಂದವರು ಎನ್ನುವ ವಿವರಗಳನ್ನು ಹೇಳುವುದು ಕಷ್ಟ. ಇದನ್ನು ನಾನು ಹೇಳಲಾರೆ.

ಶ್ರೀ ಜಿ. ಮಾದೇಗೌಡ.—ಇನ್‌ವೆಸ್ಟಿಗೇಷನ್ನು ಮಾಡುವಾಗ ಸರಕಾರದವರು ಕುಡಿದವರು ಯಾವ ಜಿಲ್ಲೆಯಿಂದ ಬಂದವರು ಎನ್ನುವುದನ್ನು ಕಂಡು ಹಿಡಿಯುವುದಕ್ಕೆ ಸಾಧ್ಯವಾಗುವುದಿಲ್ಲವೇ ?

ಶ್ರೀ ಡಿ. ದೇವರಾಜ ಅರಸ್.—ಈ ಪಾನ ಎನ್ನುವುದು ಎಲ್ಲ ಪ್ರೊಹಿಬಿಷನ್ನು ಜಾರಿಯಲ್ಲದೆಯೋ ಅಲ್ಲೆ ನಾನಾ ರೀತಿಯಲ್ಲಿ ಬರಬಹುದು. ಅಥವಾ ಮ್ಯಾನುಫಾಕ್ಚರು ಆಗಬಹುದು. ಅಥವಾ ಬೇರೆ ಕಡೆಗಳಿಂದಲೂ ಬರಬಹುದು. ಎರಡು ರೀತಿಯಿಂದಲೂ ಬರುತ್ತದೆ. ಮಂಡ್ಯ ಜಿಲ್ಲೆಯಲ್ಲಿ ಮಾನುಫ್ಯಾಕ್ಚರೂ ಆಗುತ್ತಿರಬಹುದು.

ಶ್ರೀ ಸಿ. ಜೆ. ಮಕ್ಕಣ್ಣಪ್ಪ.—ಉತ್ತರದಲ್ಲಿ ಹೇಳಿರುವ 203 ಮತ್ತು 235 ಕೇಸುಗಳಲ್ಲಿ ಹೆಂಡವನ್ನು ಸ್ಟೊಕಲ್ ಟ್ಯೂಬುಗಳಲ್ಲಿ, ಕಾರಿನ ಟ್ಯೂಬುಗಳಲ್ಲಿ ತಂದಿದ್ದವರು ಎಷ್ಟು ಜನ !

ಶ್ರೀ ಡಿ. ದೇವರಾಜ ಅರಸ್.—ಇವೆಲ್ಲಾ ಬರೀ ಡೀಟೆಲ್ಸ್ ಆದುವು. ಏಕೆಂದರೆ ಇಲ್ಲಿರುವುದು 203 ಕೇಸುಗಳ ವಿಚಾರ. ಇದನ್ನೆಲ್ಲಾ ಹೇಳಬೇಕೆಂದರೆ ಬಹಳ ಕಷ್ಟವಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹೊರಗಡೆಯಿಂದ ಎಷ್ಟು ಜನ ಟ್ರಾನ್ಸ್‌ಫೋರ್ಟ್ ಮಾಡಿದರು?

Mr. SPEAKER.—He has no break up.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಕಳ್ಳಭಟ್ಟಿ ಸಾರಾಯಿ ಮಾಡಿದವರನ್ನು ಹಿಡಿದ ಕೇಸುಗಳೆಷ್ಟು? ಬೆಂಗಳೂರಿನಿಂದ ಬ್ರಾಂಡಿ, ಏಸ್ಕೀ, ವೈನ್, ಇತ್ಯಾದಿಗಳನ್ನು ತಂದು ಮಾರಾಟ ಮಾಡಿದವರ ಸಂಖ್ಯೆ ಎಷ್ಟು?

ಶ್ರೀ ಡಿ. ದೇವರಾಜ ಅರಸ್.—ಇವೆಲ್ಲಾ ಬೇಕಾದರೆ ಅಲಾಯದಾ ಪ್ರಶ್ನೆ ಕೇಳಿದರೆ ವಿವರ ಕೊಡಬಹುದು ಎಂದು ನನ್ನ ಸಲಹೆ. ಈಗ ವಿವರಗಳಿಲ್ಲ.

ಶ್ರೀ ಜಿ. ಮಾದೇಗೌಡ.—1961ನೇ ಸಾಲಿನಲ್ಲಿ 203 ಕೇಸುಗಳಲ್ಲಿ 201 ಕೇಸುಗಳ ಮೇಲೆ ಚಾರ್ಜ್‌ಷೀಟಾಗಿದೆ ಎಂದಿದ್ದೀರಿ. ಇನ್ನುಳಿದ ಎರಡು ಕೇಸುಗಳು ಏನಾಗಿವೆ?

ಶ್ರೀ ಡಿ. ದೇವರಾಜ ಅರಸ್.—ಅವು ಇನ್ನೂ ಇನ್‌ವೆಸ್ಟಿಗೇಷನ್ನಿನಲ್ಲಿವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕುಡಿದಿರುವವರು ಯಾರು ಎನ್ನುವುದನ್ನು ಹೇಗೆ ಟೆಸ್ಟು ಮಾಡುತ್ತೀರಿ?

ಶ್ರೀ ಡಿ. ದೇವರಾಜ ಅರಸ್.—ಡಾಕ್ಟರುಗಳು ಕುಡಿದಿರುವವರನ್ನು ಪರೀಕ್ಷೆ ಮಾಡುತ್ತಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಇಂತಹ ಜನ ಕುಡಿದಿದ್ದಾರೆ ಎನ್ನುವುದನ್ನು ಪತ್ತೆ ಹಚ್ಚುವುದಕ್ಕೆ ಡಾಕ್ಟರುಗಳಿಗೆ ಏನೇನು ಸೌಲಭ್ಯ ಸಲಕರಣೆಗಳನ್ನು ಒದಗಿಸಿ ಕೊಡಲಾಗಿದೆ?

ಶ್ರೀ ಡಿ. ದೇವರಾಜ ಅರಸ್.—ಡಾಕ್ಟರುಗಳಾಗಿರುವವರು ನಾನಾ ರೀತಿಯ ಪರೀಕ್ಷೆಗಳನ್ನು ನಡೆಸುತ್ತಾರೆ. ಬಹುಶಃ ಕುಡಿದಿರುವುದು ಎಷ್ಟು ಪರ್ಸೆಂಟೇಜಿದೆ ಎನ್ನುವುದನ್ನು ನೋಡಲು ಅವರು ತಿಂದ ಆಹಾರವನ್ನು ಟೆಸ್ಟು ಮಾಡುತ್ತಾರೆ. ಕೆಲವು ವೇಳೆ ವಾಂತಿ ಮಾಡಿಸುತ್ತಾರೆ. ಹೀಗೆ Chemical Examination ಎಂದರೆ ರಾಸಾಯನಿಕ ಶಾಸ್ತ್ರದ ವಿಧಿನಿಯಮಗಳಿಗನುಸಾರವಾಗಿ ಇದನ್ನೆಲ್ಲಾ ಟೆಸ್ಟು ಮಾಡುತ್ತಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಪೋಲೀಸಿನವರು ಕುಡಿದಿದ್ದಾರೆಂದು ನುಮಾರು 25 ಜನರನ್ನು ಅವರ ವ್ಯಾನಿನಲ್ಲಿ ಕೂರಿಸಿಕೊಂಡು ಡಾಕ್ಟರುಗಳ ಬಳಿಕರೆದುಕೊಂಡು ಹೋಗಿ ಅವರು ಪರೀಕ್ಷೆ ಮಾಡಿ ಕುಡಿದಿಲ್ಲ ಎಂದು ಸರ್ಟಿಫಿಕೇಟು ಕೊಟ್ಟಿರುವುದೂ ಸರಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಡಿ. ದೇವರಾಜ ಅರಸ್.—ಇದನ್ನೆಲ್ಲಾ ಸರ್ವೇ ಸಾಧಾರಣವಾಗಿ ಹೇಗೆ ಹೇಳುವುದಕ್ಕಾಗುತ್ತದೆ? ಸರಿಯಾಗಿ ಡಾಕ್ಟರುಗಳೇ ಟೆಸ್ಟು ಮಾಡುತ್ತಾರೆ.

ಶ್ರೀ ಜಿ. ಮಾದೇಗೌಡ.—ಸಪ್ಲೈ ಮಾಡಿದವರ ಮೇಲೆ ಹಾಕಿರತಕ್ಕ ಕೇಸುಗಳೇನಾದರೂ ಇವೆಯೇ?

ಶ್ರೀ ಡಿ. ದೇವರಾಜ ಅರಸ್.—ಈ ಕೇಸುಗಳಲ್ಲಿ ಎಲ್ಲರೂ ಇವಾಲ್ವ್ ಆಗಿರುತ್ತಾರೆ. ಎಲ್ಲೆಲ್ಲ ಮದ್ಯಪಾನ ನಿರೋಧ ಜಾರಿಯಲ್ಲದೆ ಅಂಥ ಕಡೆ ಮದ್ಯವನ್ನು ಇಟ್ಟುಕೊಂಡಿದ್ದರೆ ತಪ್ಪಾಗುತ್ತದೆ.

Sri G. V. GOWDA.—Has it come to the notice of the Government that in the case where drunken people are taken, chemical examination is not done, but the doctor only smells and gives a certificate?

ಶ್ರೀ ಡಿ. ದೇವರಾಜ ಅರಸ್.—ಈಗ ನಾನು ಹೇಳಿದ ಇನ್‌ವೆಸ್ಟಿಗೇಷನ್‌ಲ್ಲರತಕ್ಕ ಎರಡು ಕೇಸುಗಳಲ್ಲಿ ಕೆಮಿಕಲ್ ಎಕ್ಸಾಮಿನೇಷನ್‌ಗೆ ಕಳುಹಿಸುವುದಕ್ಕೋಸ್ಕರವೇ ಇನ್‌ವೆಸ್ಟಿಗೇಷನ್ ಪೂರ್ತಿ ಆಗದಿರುವುದಕ್ಕೆ ಕಾರಣವಾಗಿದೆ.

ಶ್ರೀ ಎಸ್. ಎಂ. ಕೃಷ್ಣ.—ಕುಡಿದವರು ಎಂದು ಕರೆದುಕೊಂಡು ಬಂದ ಪೋಲೀಸ್‌ನವರನ್ನು ಡಾಕ್ಟರು ಎಕ್ಸಾಮಿನ್ ಮಾಡುತ್ತಾರೆಯೇ?

ಶ್ರೀ ಡಿ. ದೇವರಾಜ ಅರಸ್.—ಆ ಪ್ರಶ್ನೆ ಇಲ್ಲಿ ಬರುವುದಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ 203 ಕೇಸುಗಳಲ್ಲಿ ಕುಡಿದವನು, ಹಿಡಿದವನು, ಹಿಡಿದುಕೊಂಡು ಬಂದವನು ಇಂಥವರನ್ನು ಪರೀಕ್ಷೆ ಮಾಡಿದ್ದು ಎಷ್ಟು ಜನ; ಇವರಹೆಸರು ಕುಡಿದವರು ಎಷ್ಟುಜನ?

M. SPEAKER.—Is the information asked for by the Hon'ble Member available with the hon. Minister?

Sri D. DEVARAJ URS.—Obviously it is not.

Sri C. J. MUCKANNAPPA.—What is the answer, Sir?

Mr. SPEAKER.—"Not available." I heard it and the member should have also heard it.

Sri K. LAKKAPPA.—Has it come to the notice of the Government that the persons who are brought before the doctors are not examined by the doctor and therefore the acquittals are many.....

Mr. SPEAKER.—How many?

Sri K. LAKKAPPA.—12. And are not these acquittals due to the negligence of the investigating officers?

Sri D. DEVARAJ URS.—The Hon'ble Member's presumption is not correct. In the year 1962, only four cases ended in acquittal. The percentage of acquittals is, therefore, very much less. Obviously almost all the cases have been successful.

Mr. SPEAKER.—He wants to know whether the cases ending in acquittals was due to the negligence of the investigating officers?

Sri D. DEVARAJ URS.—As you are also aware, Sir.....

Mr. SPEAKER.—I am not aware of prohibition cases.

Sri D. DEVARAJ URS.—Acquittal may be due to so many reasons. They may be on other grounds than what the Hon'ble Member contemplates.

ಶ್ರೀ ಇ. ನಾರಾಯಣಗೌಡ.—ಈ ಕೇಸುಗಳಲ್ಲಿ ನಾಬೀತಾಗದೇ ವಜಾ ಆಗಿರತಕ್ಕ ನಂದರ್ಭಗಳಲ್ಲಿ ಕೆಲವು ಔಷಧಿಗಳಲ್ಲಿ ಆಲ್ಕೋಹಾಲ್ ಸೇರಿಸಿ ಔಷಧಿ ಸೇವನೆಮಾಡಿದ್ದಾರೆಂದು ಡಾಕ್ಟರ್ ಸರ್ಟಿಫಿಕೇಟ್ ಕೊಟ್ಟಿರುವುದು ಇದೆಯೇ ?

ಶ್ರೀ ಡಿ. ದೇವರಾಜ ಅರಸ್.—ಇದರಲ್ಲಿ ಅಂಥಾದ್ದು ಯಾವುದೂ ಇಲ್ಲ.

Sri G. V. GOWDA.—May I know whether anything is paid by way of remuneration to the doctors who examine these cases ?

Sri D. DEVARAJ URS.—Notice, Sir.

ಶ್ರೀ ಕೆ. ಎಸ್. ನೂರ್ಯನಾರಾಯಣರಾವ್.—ಈ 201 ಮತ್ತು 216 ಕೇಸುಗಳಲ್ಲಿ ಕನವಿಕ್ಷ್ ಆಗಿರುವುದು ಎಷ್ಟು ?

Sri D. DEVARAJ URS.—That information is not readily available with me.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಕುಡಿಯುವವರ ಮೇಲೇ ಜಾಸ್ತಿ ಕೇಸು ಹಾಕುತ್ತಾ ಇದ್ದೀರಿ. ತಯಾರು ಮಾಡುವವರ ಮೇಲೆ ಕೇಸು ಹಾಕುತ್ತಿಲ್ಲ ಕಾರಣವೇನು ?

Mr. SPEAKER.—Why does the member think that it is so ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಯಾರು ಮಾಡುವವರು ಮಾಮೂಲು ಕೊಡುತ್ತಾರೆ. ಒಬ್ಬಬ್ಬರು ಕುಡಿದವರು ಬಂದರೆ ಅವರನ್ನು ಹಿಡಿದುಕೊಳ್ಳುತ್ತಾರೆ.

Mr. SPEAKER.—Now the Member himself has answered his own question and the Minister need not answer it.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅನೇಕರಿಗೆ ಪರ್ಮಿಟ್ ಕೊಟ್ಟು ಔಷಧಿ ತಯಾರು ಮಾಡುತ್ತಾ, ಇರುವುದರಿಂದ ಅವರ ಮೇಲೆ ಕೇಸು ಹಾಕದೇ ಇರುವುದಕ್ಕೆ ಕಾರಣವೇನು ?

ಶ್ರೀ ಡಿ. ದೇವರಾಜ ಅರಸ್.—ಕುಡಿಯುವವರು, ತಯಾರು ಮಾಡುವವರು ಎಲ್ಲರಮೇಲೂ ಕೇಸು ಹಾಕುತ್ತೇವೆ. ಲೈಸೆನ್ಸ್ ತೆಗೆದುಕೊಂಡು ಔಷಧಿ ತಯಾರು ಮಾಡಿದರೆ ಅದಕ್ಕೆ ಹೇಗೆ ಇದು ಸಂಬಂಧಿಸುತ್ತದೆ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಅವರು ಔಷಧಿ ಮಾಡದೇ ಬರೀ ಮದ್ಯ ತಯಾರು ಮಾಡುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಗಮನಕ್ಕೆ ಬಂದರೆ ಅಂಥವರ ಮೇಲೂ ಕೇಸ್ ಹಾಕುತ್ತೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಗಮನಕ್ಕೆ ಬರುವುದು ಎಂದರೆ 20 ಸಾರಿ ಹೇಳಿದ್ದೇವೆ. ಹೇಗೆ ತಮ್ಮ ಗಮನಕ್ಕೆ ತರುವುದು ಅಂತ ?

(*No answer*)

ಶ್ರೀ ಬಿ. ಚನ್ನಬೈರೇಗೌಡ.—61-62 ಮತ್ತು 62-63ರಲ್ಲಿ ಒಟ್ಟು 417 ಕೇಸುಗಳನ್ನು ಹಾಕಿದ್ದೀರಿ. ಅಲ್ಲಿ ಪಾನ ನಿರೋಧ ಯಶಸ್ವಿಯಾಗಿದೆ ಅಂತಲೇ, ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್.—ಮಂಡ್ಯ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಯಶಸ್ವಿಯಾಗಿ ನಡೆಯುತ್ತಾ ಇರುವುದರಿಂದಲೇ ಇಷ್ಟೊಂದು ಕೇಸುಗಳನ್ನು ಹಿಡಿದಿದ್ದಾರೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಮಂಡ್ಯ ಜಿಲ್ಲೆಯಲ್ಲಿ ಪ್ರೊಹಿಬಿಷನ್ ಪಾಲಿಸಿ ಸರಿಯಾಗಿ ನಡೆಯುತ್ತಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ನಮ್ಮ ಗಮನಕ್ಕೆ ಬಂದಿರುವ ಹಾಗೆ ಸರಿಯಾಗಿ ನಡೆಯುತ್ತಾ ಇದೆ.

ಶ್ರೀ ಕೆ. ಲಕ್ಕಪ್ಪ.—ಈ acquit ಆಗಿರುವ ಕೇಸುಗಳ ಪೈಕಿ ಸರ್ಕಾರದವರಿಗೆ ಎಷ್ಟು ಅಪೀಲ್ ಕೇಸುಗಳನ್ನು ಹಾಕಿದ್ದಾರೆ ?

ಶ್ರೀ ಡಿ. ದೇವರಾಜ ಅರಸ್.—ಇದರಲ್ಲಿ ಅಂಥದು ಯಾವುದೂ ಇಲ್ಲ.

ಶ್ರೀ ಕೆ. ಎಚ್. ರಂಗನಾಥ್.—ನಜಾ ಆಗಿರುವ ಕೇಸುಗಳಲ್ಲಿ ಪೋಲೀಸ್‌ನವರ ಮಾತಿನ ಮೇಲೆ ಕೋರ್ಟ್‌ನಲ್ಲಿ ಒಪ್ಪಿಕೊಂಡ ಕೇಸುಗಳು ಎಷ್ಟು ಮತ್ತು ಕಂಟೆಸ್ಟ್ ಮಾಡಿ ನಜಾ ಆಗಿರುವುದು ಎಷ್ಟು?

Sri D. DEVARAJ URS.—It is always left to the court to convict or discharge.

———

Restoration of Veerapura Tank in Kolala Hoblii, Koratagere Taluk.

*Q.—505. Sri T. S. SHIVANNA (Madhugiri).—

Will the Government be pleased to state:—

(*a*) when the restoration work of Veerapura Tank in Kolala Hobli, Koratagere Taluk, Tumkur District, was estimated by the Koratagere P.W.D. Sub-Division ;

(*b*) whether they are aware that the ryots are urging for the construction of this tank since a long time ?

A.—Sri ALUR HANUMANTHAPPA (Deputy Minister for Minor Irrigation).—

(*a*) During August, 1961.

(*b*) Yes.

ಶ್ರೀ ಟಿ. ಎಸ್. ಶಿವಣ್ಣ.—ಈ ಕೆರೆ ರೆಸ್ಟೋರ್ ಮಾಡಬೇಕೆಂದು ಯಾವಾಗ ಸರ್ಕಾರಕ್ಕೆ ಮನವಿ ಬಂತು ?

†ಶ್ರೀ ಆಲೂರು ಹನುಮಂತಪ್ಪ.—ಆಗಸ್ಟ್ 1961ರಲ್ಲಿ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಆಗಸ್ಟ್ 1961ರಲ್ಲಿ ಎಸ್ಟಿಮೇಟ್ ಮಾಡಿದೆ ಎಂದು ಹೇಳಿದ್ದೀರಿ. ಮನವಿ ಯಾವಾಗ ಬಂತು ಎಂದು ಅವರು ಕೇಳುವುದು.

ಶ್ರೀ ಆಲೂರು ಹನುಮಂತಪ್ಪ.—ಆ ತಾರೀಖು ಇಲ್ಲಿ ಇಲ್ಲ. ರೈತರಿಂದ ಮನವಿ ಬಂದಮೇಲೆ ಈ ಎಸ್ಟಿಮೇಟ್ ಮಾಡಲಾಯಿತು.

Indicates that the remarks or speeches have not been revised by the Member concerned.